ಕುಮಾರಸ್ವಾಮಿಯವರು ಆಗಲೇ ಹೇಳಿದಂತೆ, toal ನಮ್ಮ State Plan ನಲ್ಲಿ ಇವತ್ತು ಕಡಿಮೆಯಾಗಿದೆ. ನಿಮಗೆ ಹೆಚ್ಚಿನ ರೀತಿಯಲ್ಲಿ ಮಾಡುತ್ತೇವೆ. . ..

ಅಧ್ಯಕ್ಷರು:– ಆಯಿತು, ಸಾಕು.

ಶ್ರೀ ಬಸವರಾಜ ಬೊಮ್ಮಾಯಿ:– ಆ ಬದ್ಧತೆಗೆ ತಕ್ಕಂತೆ ನೀವು ನಡೆದುಕೊಂಡಿಲ್ಲ. ಸರ್ಕಾರ ವಿಫಲವಾಗಿದೆ. ನೀರಾವರಿ ಸಾಮರ್ಥ್ಯವನ್ನು ಯಾವ ರೀತಿ ನೀವು create ಮಾಡುತ್ತೀರಿ? Land acquisition ಇವೆಲ್ಲ ಸಮಸ್ಯೆ ಇದೆ. ಯಾವ ರೀತಿ ಬಗೆಹರಿಸುತ್ತೀರಿ? ಇದರ ಬಗ್ಗೆ ನಿಮ್ಮ ಸರ್ಕಾರದ ಸ್ಪಷ್ಟವಾದ, ಸರ್ಕಾರಕ್ಕೆ priorities ಇಲ್ಲ.

ಅಧ್ಯಕ್ಷರು:– ಉತ್ತರ ಹೇಳುತ್ತಾರೆ. ಆಯಿತು, ಸಾಕು ಬಿಡಿ.

ಶ್ರೀ ಬಸವರಾಜ ಬೊಮ್ಮಾಯಿ:– ಇದರ ಬಗ್ಗೆ ಬಹಳ ಸ್ಪಷ್ಟವಾದಂಥ ವಿಚಾರಗಳನ್ನು ಹೇಳಬೇಕು. ಬಹಳ ವಿಷಯಗಳಿದ್ದವು.

ಅಧ್ಯಕ್ಷರು:– ಎಲ್ಲ ಬೇಡ. I am helpless.

4. 1) ಪ್ರಕಟಣೆ

ಅಧ್ಯಕ್ಷರು:– ದಿ: 24–07–2014 ರ ಈ ದಿನ ಮಧ್ಯಾಹ್ನ 2.15ರಿಂದ 3.30 ಗಂಟೆವರೆಗೆ ವಿಧಾನಸೌಧದ ಮೂರನೇ ಮಹಡಿಯಲ್ಲಿರುವ ಸಮ್ಮೇಳನ ಸಭಾಂಗಣದಲ್ಲಿ ಪರಿಸರ, ನಿಸರ್ಗ ಸಂರಕ್ಷಣೆ ಸಂಸ್ಥೆಯ ವತಿಯಿಂದ ಪರಿಸರ ರಕ್ಷಣೆ ಮತ್ತು ಭೂ ಸಂರಕ್ಷಣೆ ಕುರಿತಂತೆ ಅರಿವು ಮೂಡಿಸುವ ಸಲುವಾಗಿ ಪ್ರಾತ್ಯಕ್ಷಿಕೆ ಏರ್ಪಡಿಸಲಾಗಿರುತ್ತದೆ. ಆದುದರಿಂದ ಪ್ರಾತ್ಯಕ್ಷಿಕೆಯಲ್ಲಿ ಪಾಲ್ಗೊಳ್ಳಬೇಕೆಂದು ತಿಳಿಯಪಡಿಸಲಾಗಿದೆ.

2) ಪ್ರಕಟಣೆ

ಅಧ್ಯಕ್ಷರು:– ನಗರಾಭಿವೃದ್ಧಿ ಸಚಿವರಾದ ಶ್ರೀ ವಿನಯಕುಮಾರ ಸೊರಕೆ ಯವರು ಈ ದಿನ ಮಧ್ಯಾಹ್ನ ಬ್ಯಾಂಕ್ವೆಟ್ ಹಾಲ್‌ನಲ್ಲಿ ಮಾನ್ಯ ಸದಸ್ಯರುಗಳ ಗೌರವಾರ್ಥ ಭೋಜನ ಕೂಟ ಏರ್ಪಡಿಸಿರುತ್ತಾರೆ.

ತಾವುಗಳೆಲ್ಲರೂ ಭೋಜನ ಕೂಟದಲ್ಲಿ ಪಾಲ್ಗೊಳ್ಳಬೇಕೆಂದು ಈ ಮೂಲಕ ಕೋರಲಾಗಿದೆ.

ಶ್ರೀ ಎಸ್. ವಿಜಯಾನಂದ ಕಾಶಪ್ಪನವರ್:– ಮಾನ್ಯ ಅಧ್ಯಕ್ಷರೆ, ಮಾನ್ಯ ಬಸವರಾಜ್ ಬೊಮ್ಮಾಯಿರವರು ಮಾತನಾಡಿರುವುದಕ್ಕೆ ಪೂರಕವಾಗಿ ಮಾತನಾಡುವುದಕ್ಕೆ ಎರಡು ನಿಮಿಷ ಅವಕಾಶ ಕೊಡಿ.

ಅಧ್ಯಕ್ಷರು:– ನಾನೊಂದು ಹೇಳಿಬಿಡಲೆ? ನಾನು ಹೇಳುತ್ತೇನೆ ಕೇಳಿ. 2 ಗಂಟೆಯೊಳಗೆ ಉತ್ತರ ಪೂರೈಸಲೇಬೇಕು. ಮಧ್ಯಾಹ್ನ 3 ಗಂಟೆಯಿಂದ 11 ಬೇಡಿಕೆಗಳಿವೆ. ಅವುಗಳನ್ನು ನಾನು ಮತಕ್ಕೆ ಹಾಕಲೇಬೇಕು. ಮೇಲಾಗಿ ಅವರದ್ದೊಂದು ಕೆರೆಗಳಿಗೆ ಸಂಬಂಧಪಟ್ಟ ಮಸೂದೆ ಇದೆ. ಅದನ್ನೂ pass ಮಾಡಬೇಕು. ಆದುದರಿಂದ, ದಯವಿಟ್ಟು, ಕ್ಷಮಿಸಿ.

ಶ್ರೀ ಎ.ಎಸ್. ಪಾಟೀಲ್ (ನಡಹಳ್ಳಿ):– ಮಾನ್ಯ ಅಧ್ಯಕ್ಷರೆ,

(ಗೊಂದಲ)

ಅಧ್ಯಕ್ಷರು:– ಆದ್ದರಿಂದ ಈಗ ಚರ್ಚೆ ಮುಕ್ತಾಯವಾಗಿದೆ. ಉತ್ತರ ಹೇಳಿ.

ಡಾ॥ ಹೆಚ್.ಸಿ. ಮಹದೇವಪ್ಪ (ಲೋಕೋಪಯೋಗಿ ಸಚಿವರು):– ಮಾನ್ಯ ಅಧ್ಯಕ್ಷರೆ,..

ಅಧ್ಯಕ್ಷರು:– Clarification ಇದ್ದರೆ ಕೇಳಿ.

(ಗೊಂದಲ)

ಶ್ರೀ ಎಸ್. ವಿಜಯಾನಂದ ಕಾಶಪ್ಪನವರ್:– ಒಂದೇ ಒಂದು ನಿಮಿಷ ಅವಕಾಶ ಕೊಡಿ.

(ಗೊಂದಲ)

ಅಧ್ಯಕ್ಷರು:– Clarification ಕೇಳಿ. ಅವಕಾಶ ಕೊಡುತ್ತೇನೆ.

(ಗೊಂದಲ)

ಡಾ॥ ಹೆಚ್.ಸಿ. ಮಹದೇವಪ್ಪ:– ನಿನ್ನೆ ಬೆಳಗ್ಗೆ 10.30 ಯಿಂದ. . . .

(ಗೊಂದಲ)

ಅಧ್ಯಕ್ಷರು:– ಏನೂ ಮಾಡುವುದಕ್ಕಾಗುವುದಿಲ್ಲ. Partyಯಿಂದ ಏನು ಕೊಟ್ಟಿದ್ದಾರೆ ಅದರಲ್ಲಿ ನಿಮ್ಮ ಹೆಸರೇ ಇಲ್ಲ.

(ಗೊಂದಲ)

ಅಧ್ಯಕ್ಷರು:– ಅದೇನೂ ಮಾಡುವುದಕ್ಕಾಗುವುದಿಲ್ಲ. ಈ ಸದನವನ್ನು manage ಮಾಡುವ ರೀತಿಯಲ್ಲಿ ಯಾರ್ಯಾರಿಗೆ ಅವಕಾಶ ಕೊಡಬೇಕೋ, ಕೊಟ್ಟಿದ್ದೇವೆ, ಅವಕಾಶ ಸಿಗದಿದ್ದರೆ ದಯವಿಟ್ಟು ತಪ್ಪು ತಿಳಿದುಕೊಳ್ಳಬೇಡಿ. ಸಮಯ ಕಡಿಮೆ ಇರುವ ಕಾರಣಕ್ಕಾಗಿ ಈ ಸನ್ನಿವೇಶ ನಿರ್ಮಾಣವಾಗಿದೆ.

ಶ್ರೀ ಎಸ್. ವಿಜಯಾನಂದ ಕಾಶಪ್ಪನವರ್:– ಎರಡೇ ನಿಮಿಷ ಅಧ್ಯಕ್ಷರೆ. ಬೊಮ್ಮಾಯಿಯವರು ಮಾತನಾಡಿದ್ದಕ್ಕೆ ಪೂರಕವಾಗಿ ಹೇಳುತ್ತೇನೆ.

ಡಾ॥ ಹೆಚ್.ಸಿ. ಮಹದೇವಪ್ಪ:– ನಿನ್ನೆ ಬೆಳಗ್ಗೆ ಸುಮಾರು 10.30 ಗಂಟೆಯಿಂದ . . . .

(ಗೊಂದಲ)

ಅಧ್ಯಕ್ಷರು:– ಬೇಡ. Please, clarification ಕೇಳಿ.

(ಗೊಂದಲ)

ಅಧ್ಯಕ್ಷರು:– Clarification ಕೇಳಿ.

ಡಾ॥ ಹೆಚ್.ಸಿ. ಮಹದೇವಪ್ಪ:– 1 ಗಂಟೆ ತನಕ ತಾವು ಸತತವಾಗಿ ಲೋಕೋಪಯೋಗಿ ಇಲಾಖೆ, ನೀರಾವರಿ ಇಲಾಖೆ. ....

(ಗೊಂದಲ)

ಅಧ್ಯಕ್ಷರು:– Clarification ಕೇಳಿ.

(ಈ ಹಂತದಲ್ಲಿ ಮಾನ್ಯ ಉಪಾಧ್ಯಕ್ಷರು ಅಧ್ಯಕ್ಷ ಪೀಠವನ್ನಲಂಕರಿಸಿದರು)

ಉಪಾಧ್ಯಕ್ಷರು:– Clarification ನಲ್ಲಿ ನಿಮಗೇ ಮೊದಲು ಅವಕಾಶ ಕೊಡುತ್ತೇನೆ.

(ಗೊಂದಲ)

ಉಪಾಧ್ಯಕ್ಷರು:– ಆಗ 2 ನಿಮಿಷ ಮಾತನಾಡಿ.

(ಗೊಂದಲ)

ಶ್ರೀ ಹೆಚ್.ಡಿ. ರೇವಣ್ಣ:– ನಮಗೆ 5 ನಿಮಿಷ ಅವಕಾಶ ಕೊಡಿ.

(ಗೊಂದಲ)

ಉಪಾಧ್ಯಕ್ಷರು:– 2–2 ನಿಮಿಷ ನಿಮಗೇ clarification ಕೇಳುವುದಕ್ಕೆ ಅವಕಾಶ ಕೊಡುತ್ತೇನೆ.

(ಗೊಂದಲ)

ಶ್ರೀ ಎಂ.ಟಿ. ಕೃಷ್ಣಪ್ಪ:– ರೇವಣ್ಣನವರು ಮಾಜಿ PWD ಸಚಿವರು. ಅವರು ಮಾತನಾಡಲಿ.

ಉಪಾಧ್ಯಕ್ಷರು:– Speaker ಹೇಳಿಬಿಟ್ಟಿದ್ದಾರೆ.

(ಗೊಂದಲ)

ಉಪಾಧ್ಯಕ್ಷರು:– ಆಮೇಲೆ ಕೊಡುತ್ತೇನೆ, ಬಿಡಿ. Clarification ನಲ್ಲಿ ಕೊಡುತ್ತೇನೆ.

(ಗೊಂದಲ)

ಶ್ರೀ ಹೆಚ್.ಡಿ. ರೇವಣ್ಣ:– ನಮಗೆ ಮಾತನಾಡುವುದಕ್ಕೆ ಅವಕಾಶವಿಲ್ಲದಿದ್ದರೂ ಪರವಾಗಿಲ್ಲ. ಆಡಳಿತ ಪಕ್ಷದವರಿಗಾದರೂ ಹೋಗಲಿ ಕೊಡಿ. ಇನ್ನೇನು ಮಾಡೋಣ?

(ಗೊಂದಲ)

ಶ್ರೀ ಸಿ.ಟಿ. ರವಿ:– ನಿಮ್ಮ ಮನಸ್ಸು, ನೀವು ಇಂಥದ್ದು ಮಾಡಬೇಕೆಂದು ಬಂದಿದ್ದೆಲ್ಲ ಆಗುವುದಿಲ್ಲವೇ? ಆದರೂ ಅವರು ಏಕೆ ಮಾತನಾಡಬೇಕು?

ಉಪಾಧ್ಯಕ್ಷರು:– ಮುಂದುವರಿಸಿ.

(ಗೊಂದಲ)

ಶ್ರೀ ಎ.ಎಸ್. ಪಾಟೀಲ್ (ನಡಹಳ್ಳಿ):– ನಮಗೆ ಮಾತನಾಡುವುದಕ್ಕೇ ಅವಕಾಶ ಕೊಟ್ಟಿಲ್ಲ ವಿಧಾನಸೌಧದಲ್ಲಿ.

(ಗೊಂದಲ)

ಶ್ರೀ ವಿಜಯಾನಂದ ಕಾಶಪ್ಪನವರ್:– ಇಲ್ಲಿ ಅವಕಾಶ ಕೊಟ್ಟಿಲ್ಲ.

ಶ್ರೀ ಎ.ಎಸ್. ಪಾಟೀಲ್ (ನಡಹಳ್ಳಿ):– ವಿಧಾನಸೌಧದಲ್ಲಿ ಮಾತನಾಡುವುದಕ್ಕೂ ಅವಕಾಶ ಕೊಟ್ಟಿಲ್ಲ.

5. ವಿತ್ತೀಯ ಕಾರ್ಯಕಲಾಪಗಳು.

2014–15ನೇ ಸಾಲಿನ ಲೋಕೋಪಯೋಗಿ ಇಲಾಖೆ ಮತ್ತು ಜಲಸಂಪನ್ಮೂಲ ಇಲಾಖೆ ಬೇಡಿಕೆಗಳ ಮೇಲೆ ಮುಂದುವರಿದ ಚರ್ಚೆ.

(ಗೊಂದಲ)

ಡಾ॥ ಹೆಚ್.ಸಿ. ಮಹದೇವಪ್ಪ (ಮಾನ್ಯ ಲೋಕೋಪಯೋಗಿ ಸಚಿವರು):– ಮಾನ್ಯ ಅಧ್ಯಕ್ಷರೆ, ಲೋಕೋಪಯೋಗಿ ಇಲಾಖೆಯ ಮೇಲೆ ಚರ್ಚೆಯನ್ನು ಪ್ರಾರಂಭಿಸಿದ ವಿರೋಧ ಪಕ್ಷದ ನಾಯಕರಾದಂಥ ಸನ್ಮಾನ್ಯ ಜಗದೀಶ್ ಶೆಟ್ಟರ್‌ರವರೂ ಸೇರಿ ಸುಮಾರು 30ಕ್ಕೂ ಹೆಚ್ಚು ಮಾನ್ಯ ಸದಸ್ಯರು ಲೋಕೋಪಯೋಗಿ ಇಲಾಖೆಯ ಮೇಲಿನ ಚರ್ಚೆಯಲ್ಲಿ ಭಾಗವಹಿಸಿ ಬೆಳಕನ್ನು ಚೆಲ್ಲಿದ್ದಾರೆ. ಶೆಟ್ಟರ್‌ರವರು ಲೋಕೋಪಯೋಗಿ ಇಲಾಖೆಯ ಮತ್ತು ಲೋಕೋಪಯೋಗಿ ಪದದ ಅರ್ಥವನ್ನು ವ್ಯಾಖ್ಯಾನಿಸಿದ್ದಾರೆ. ಆ ಮಾರ್ಗದಲ್ಲೇ ಮಾತನಾಡಿದಂಥ ಎಲ್ಲ ಸದಸ್ಯರೂ ಕೂಡ ಅವರ ಮಾತಿನ